ದಿನಾಂಕಃ 12.01.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ ಎಸ್.ಡಿ. ವಕೀಲರಿಂದಃ**

ವಾದಿ ಪೈಲೆಟ್ ಆಗಿ ಕೆಲಸ ಮಾಡುತ್ತಿದ್ದಾರೆ. ದಾವಾ ಜಮೀನುಗಳ ಖಾತೆ 2002 ನೇ ಇಸವಿಯಲ್ಲಿ ಜುಬಾನೆ ಹಿಸ್ಸೆಯ ಮೂಲಕ ವಾದಿಯ ಹೆಸರಿಗೆ ದಾಖಲಾಗಿದೆ. ಆ ಮೊದಲು ದಾವಾ ಸ್ವತ್ತುಗಳು ನನ್ನ ಹೆಸರಿನಲ್ಲಿ ಇದ್ದವು. ದಾವಾ ಜಮೀನುಗಳ ಪೈಕಿ ಕ್ರ.ಸಂ.5 ಮತ್ತು 7 ರ ಜಮೀನುಗಳು ಜುಬಾನೆ ಹಿಸ್ಸೆಯ ಮೂಲಕ ನನ್ನ ಹೆಸರಿಗೆ ಬಂದಿದ್ದು ಉಳಿದ ಜಮೀನುಗಳ ಪೈಕಿ ಕ್ರ.ಸಂ.2 ಮತ್ತು 6 ರ ಜಮೀನನ್ನು 1992 ನೇ ಇಸವಿಯಲ್ಲಿ ಎಂ.ಟಿ.ಹುಚ್ಚೇಗೌಡರಿಂದ ಹಾಗೂ ಕ್ರ.ಸಂ.1, 3 ಮತ್ತು 4 ರ ಜಮೀನುಗಳನ್ನು 2007 ನೇ ಇಸವಿಯಲ್ಲಿ ಸುದರ್ಶನ್‌ರವರಿಂದ ನಾನು ಕ್ರಯಕ್ಕೆ ಪಡೆದುಕೊಂಡಿರುತ್ತೇನೆ. ಕ್ರಯಪತ್ರಗಳನ್ನು ಹಾಜರುಪಡಿಸಿರುತ್ತೇನೆ. ಈ ವಿಚಾರವನ್ನು ವಾದಪತ್ರದಲ್ಲಿ ಮತ್ತು ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿ ಬರೆಸಿದ್ದೇನೆ.

ನಾನು ಸಲ್ಲಿಸಿರುವ ಮುಖ್ಯ ವಿಚಾರಣಾ ಪ್ರಮಾಣಪತ್ರವನ್ನು ಓದಿದ್ದೇನೆ. ನನ್ನ ಹೆಸರಿಗೆ ಇರುವ ಜುಬಾನೆ ಹಿಸ್ಸೆಯಲ್ಲಿ ಜಮೀನುಗಳ ಚೆಕ್ಕುಬಂದಿಯನ್ನು ನಮೂದು ಮಾಡಿದ್ದಾರೆ. ಜುಬಾನೆ ಹಿಸ್ಸೆಯ ಪ್ರಕಾರ ದಾವಾ ಶೆಡ್ಯೂಲ್ ಕ್ರ.ಸಂ.7 ಸ.ನಂ.317/2 ಎ ರ ಚೆಕ್ಕುಬಂದಿ ಪೂರ್ವಕ್ಕೆ ಎಂ.ಟಿ.ಲಕ್ಷ್ಮಣಗೌಡ ಮತ್ತು ಶಾರದಮ್ಮ ರವರಿಗೆ ಸೇರಿದ ಸ.ನಂ.317 ರ ಜಮೀನು, ಪಶ್ಚಿಮಕ್ಕೆ ಪ್ರಭುಗೌಡರವರ ಜಮೀನು, ಉತ್ತರಕ್ಕೆ ಡಿ.ಎಂ.ಪುಟ್ಟೇಗೌಡರವರ ಜಮೀನು ಮತ್ತು ದಕ್ಷಿಣಕ್ಕೆ ರಾಜುಗೌಡರವರ ಜಮೀನು ಇದೆ. ದಾವಾದಲ್ಲಿ ಸ.ನಂ.317/2 ಎ ಎಂದು ಬರೆಸಿದ್ದೇನೆ. ಸ.ನಂ.317/2 ರ ಜಮೀನು ನನ್ನ ತಂದೆ-ತಾಯಿಗೆ ಸೇರಿದ್ದು. ಮೇಲೆ ಹೇಳಿದ ಚೆಕ್ಕುಬಂದಿ ಜುಬಾನೆ ಹಿಸ್ಸೆಯಲ್ಲಿ ನಮೂದಾಗಿದೆ.

ದಿ.28.07.2021 ರ ವಿಭಾಗಪತ್ರದಂತೆ ದಾವಾ ಶೆಡ್ಯೂಲ್ ಕ್ರ.ಸಂ.7 ರ ಜಮೀನು ವಾದಿಯ ಹಿಸ್ಸೆಗೆ ಹೋಗಿದೆ. ಆ ವಿಭಾಗಪತ್ರಕ್ಕೆ ನಾನು ಓದಿ ಸಹಿ ಮಾಡಿದ್ದೇನೆ. ಮೇಲೆ ಹೇಳಿದ ಚೆಕ್ಕುಬಂದಿಯನ್ನು ಆ ವಿಭಾಗಪತ್ರದಲ್ಲಿಯೂ ಸಹಾ ತೋರಿಸಲಾಗಿದೆ. ದಾವಾ ಶೆಡ್ಯೂಲ್ ಕ್ರ.ಸಂ.5 ರ ಜಮೀನಿನ ಪೂರ್ವಕ್ಕೆ ಸ.ನಂ.278 ರ ಎಂ.ಎಸ್.ಅಚಲ್ ರವರ ಜಮೀನು, ಪಶ್ಚಿಮಕ್ಕೆ ಕೆರೆ ಮತ್ತು ಸ.ನಂ.280 ರ ಎಂ.ಎಸ್.ಸಚ್ಚೇಗೌಡರ ಜಮೀನು, ಉತ್ತರಕ್ಕೆ ಸರ್ಕಾರಿ ಸ.ನಂ.279 ಮತ್ತು ಅದರಲ್ಲಿ ಪ್ರಹ್ಲಾದ್ ಗೌಡರವರ ಒಂದು ಕೂಲಿ ಲೈನ್ ಮತ್ತು ದಕ್ಷಿಣಕ್ಕೆ ಸಚ್ಚೇಗೌಡರವರ ತೋಟ ಇದೆ. ಇದೇ ಚೆಕ್ಕುಬಂದಿಯನ್ನು ವಾದಪತ್ರದಲ್ಲಿ ತೋರಿಸಿದ್ದು, 1985 ರ ಜುಬಾನೆ ಹಿಸ್ಸೆಯಲ್ಲಿಯೂ ಬರೆಯಲಾಗಿದೆ. ನಿಪಿ-9 ರಲ್ಲಿ ಸ.ನಂ.280 ರ ಜಮೀನಿನ ದಕ್ಷಿಣ ದಿಕ್ಕಿಗೆ ಕೆರೆಯನ್ನು ತೋರಿಸಲಾಗಿದೆ ಎಂದರೆ ಸರಿ.

ದಾವಾ ಶೆಡ್ಯೂಲ್ ಕ್ರ.ಸಂ.1 ರ ಪೂರ್ವಕ್ಕೆ ಪ್ರವೀಣ್ ರವರ ತೋಟ, ಪಶ್ಚಿಮಕ್ಕೆ ಎಂ.ಎಸ್.ಅಚಲ್ ರವರ ಸ.ನಂ.278 ರ ಜಮೀನು, ಉತ್ತರಕ್ಕೆ ಅರುಣ್ ರವರ ತೋಟ ಮತ್ತು ದಕ್ಷಿಣಕ್ಕೆ ಸಚ್ಚೀಗೌಡರವರ ತೋಟ ಇದೆ.ಇದೇ ಚೆಕ್ಕುಬಂದಿಯನ್ನು ವಾದಪತ್ರದಲ್ಲಿ ತೋರಿಸಿದ್ದು, ನಿಪಿ-9 ರಲ್ಲಿಯೂ ಸಹಾ ಬರೆಯಲಾಗಿದೆ. ದಾವಾ ಶೆಡ್ಯೂಲ್ ಕ್ರ.ಸಂ.2 ರ ಪೂರ್ವಕ್ಕೆ ಪ್ರವೀಣ್ ರವರ ತೋಟ, ಪಶ್ಚಿಮಕ್ಕೆ ಎಂ.ಎಸ್.ಅಚಲ್ ರವರ ಸ.ನಂ.278 ರ ಜಮೀನು, ಉತ್ತರಕ್ಕೆ ಎಂ.ಎಸ್.ಅಚಲ್ ರವರ ಸ.ನಂ.274 ರ ಜಮೀನು ಮತ್ತು ದಕ್ಷಿಣಕ್ಕೆ ಸಚ್ಚೀಗೌಡರವರ ಜಮೀನು ಇದೆ. ಈ ಬಗ್ಗೆ ವಾದಪತ್ರ, ನಿಪಿ-9 ಮತ್ತು 13 ರಲ್ಲಿ ತೋರಿಸಲಾಗಿದೆ. ದಾವಾ ಶೆಡ್ಯೂಲ್ ಕ್ರ.ಸಂ.3 ರ ಪೂರ್ವಕ್ಕೆ ಸ.ನಂ.274 ರ ಜಮೀನು, ಪಶ್ಚಿಮಕ್ಕೆ ಸ.ನಂ.280 ರ ಜಮೀನು, ಉತ್ತರಕ್ಕೆ ಅರುಣ್ ರವರ ತೋಟ ಮತ್ತು ದಕ್ಷಿಣಕ್ಕೆ ಸಚ್ಚೀಗೌಡರವರ ಜಾಗ ಇದೆ. ದಾವಾ ಶೆಡ್ಯೂಲ್ ಕ್ರ.ಸಂ.3 ರ ಜಮೀನು ನಿಪಿ-9 ರ ಪ್ರಕಾರ ವಾದಿಯ ಹಿಸ್ಸೆಗೆ ಹೋಗಿದೆ. ಈಗ ಹೇಳಿದ ಚೆಕ್ಕುಬಂದಿಯನ್ನು ವಾದಪತ್ರದಲ್ಲಿ ಬರೆಸಲಾಗಿದೆ.

ದಾವಾ ಶೆಡ್ಯೂಲ್ ಕ್ರ.ಸಂ.4 ರ ಜಮೀನಿನ ಪೂರ್ವಕ್ಕೆ ಕೆರೆ ಮತ್ತು ಪ್ರಭುಗೌಡರವರ ಜಮೀನು, ಪಶ್ಚಿಮಕ್ಕೆ ಸರ್ಕಾರಿ ಕೆರೆ, ಉತ್ತರಕ್ಕೆ ಎಂ.ಎಸ್.ಅಚಲ್ ರವರ ಸ.ನಂ.280 ರ ಜಮೀನು ಮತ್ತು ದಕ್ಷಿಣಕ್ಕೆ ಸಚ್ಚೀಗೌಡರವರ ಜಮೀನು ಇದೆ. ಈ ಚೆಕ್ಕುಬಂದಿಯನ್ನು ವಾದಪತ್ರದಲ್ಲಿ ಹಾಗೂ ನಿಪಿ-9 ಮತ್ತು 10 ರಲ್ಲಿ ತೋರಿಸಲಾಗಿದೆ. ದಾವಾ ಶೆಡ್ಯೂಲ್ ಕ್ರ.ಸಂ.6 ರ ಪೂರ್ವಕ್ಕೆ ಸ.ನಂ.90 ಹಾಗೂ ಮಂಜುನಾಥ್ ಗೌಡರವರ ಜಮೀನು, ಪಶ್ಚಿಮಕ್ಕೆ ಕೊಪ್ಪ ದವರ ಒಂದು ತೋಟ, ಉತ್ತರಕ್ಕೆ ಪೃಥ್ವೀರವರ ತೋಟ ಮತ್ತು ದಕ್ಷಿಣಕ್ಕೆ ಎಂ.ಎಸ್.ಲಕ್ಮೀಶ್ ರವರ ತೋಟ ಇದೆ. ಇದೇ ಚೆಕ್ಕುಬಂದಿಯನ್ನು ವಾದಪತ್ರ ಹಾಗೂ ನಿಪಿ-9 ಮತ್ತು 10 ರಲ್ಲಿ ತೋರಿಸಲಾಗಿದೆ.

ಕೆಲ್ಲೂರು ಗ್ರಾಮದ ಸ.ನಂ.78 ರ ಜಮೀನು ದಾವಾ ಜಮೀನುಗಳ ಯಾವುದೇ ದಿಕ್ಕಿಗೆ ಇಲ್ಲ. ಮಾಕೋನಹಳ್ಳಿ ಗ್ರಾಮದ ಸ.ನಂ.416/2 ರ ಪೋಡಿಯನ್ನು ರದ್ದುಪಡಿಸಲು ಸಲ್ಲಿಸಿರುವ ಅರ್ಜಿಯು ಚಿಕ್ಕಮಗಳೂರಿನ DDLR ರವರ ನ್ಯಾಯಾಲಯದಲ್ಲಿ ಇತ್ಯರ್ಥಕ್ಕೆ ಇದೆ. ಸ.ನಂ.416/2 ರ ಜಮೀನಿನ ಪೋಡಿಯನ್ನು ರದ್ದುಪಡಿಸಲು ಅರ್ಜಿ ಸಲ್ಲಿಸಿರುವ ವಿಚಾರವನ್ನು ವಾದಪತ್ರದಲ್ಲಿ ಬರೆಸಲಾಗಿದೆ. ಸಾಕ್ಷಿಯು ಸ್ವತಃ ಸ.ನಂ.416 ರ ಹಳೇ ಸ.ನಂ.285 ಎಂದು ನುಡಿಯುತ್ತಾರೆ. ಸ.ನಂ.416/2 ರ ಜಮೀನು 3 ¼ ಎಕರೆ ಇದ್ದು, ಅದು ಎಂ.ಟಿ.ಲಕ್ಷ್ಮಣಗೌಡರವರ ಹೆಸರಿನಲ್ಲಿ ಇತ್ತು. ಸದರಿ ಜಮೀನು ಎಂ.ಟಿ.ಲಕ್ಷ್ಮಣಗೌಡರವರಿಗೆ ಹೇಗೆ ಬಂತು ಎಂದರೆ ಸಾಕ್ಷಿಯು ಅದು ಸರ್ಕಾರಿ ಜಮೀನು ಎಂದು ಹಾಗೂ ತಮಗೆ ತಿಳಿದ ಹಾಗೇ ಇಲ್ಲಿಯವರೆಗೂ ಲಕ್ಷ್ಮಣಗೌಡರವರ ಹೆಸರಿಗೆ ಖಾತೆ ಆಗಿಲ್ಲ ಎಂದು ನುಡಿಯುತ್ತಾರೆ. ಸ.ನಂ.416/2 ನ್ನು 1 ನೇ ಪ್ರತಿವಾದಿ ಪೋಡಿ ಮಾಡಿಸಿಕೊಂಡಿದ್ದಾರೆ. ಆ 3 ¼ ಎಕರೆ

ಜಮೀನಿನಲ್ಲಿ ಕಣ, ಮನೆ, ಔಟ್ ಹೌಸ್, ಕಾರ್ ಗ್ಯಾರೇಜ್ ಹಾಗೇ ಇಳಿಜಾರು ಜಾಗ ಇದೆ. ಸದರಿ ಜಾಗದಲ್ಲಿ ನಾನೇ ಮನೆ ನಿರ್ಮಾಣ ಮಾಡಿದ್ದೇನೆ ಎಂದು ವಾದಪತ್ರದಲ್ಲಿ ಹೇಳಿ ಆ ಜಾಗದ ವಿಚಾರವಾಗಿ ಪ್ರತಿಬಂಧಕಾಜ್ಞೆ ನೀಡಬೇಕೆಂದು ಈ ದಾವೆಯಲ್ಲಿ ಕೇಳಿಕೊಂಡಿದ್ದೇನೆ. ಈ ವಿಚಾರವನ್ನು ವಾದಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಿ ಹೇಳಿದ್ದೇನೆ.

ನಿಪಿ-15 ರ ಜುಬಾನೆ ಹಿಸ್ಸೆಗೆ ನಾನು ಓದಿ ನೋಡಿದ ನಂತರ ಸಹಿ ಮಾಡಿದ್ದೇನೆ. ಅದಕ್ಕೆ ಬೆಂಗಳೂರಿನ ನನ್ನ ಮನೆಯಲ್ಲಿ ಸಹಿ ಮಾಡಿದ್ದೇನೆ. ಆ ಜುಬಾನೆ ಹಿಸ್ಸೆಗೆ ನಮ್ಮ ಕುಟುಂಬದ ಎಲ್ಲಾ ಸದಸ್ಯರುಗಳು ಸಹಿ ಮಾಡಿದ್ದಾರೆ. ನಿಪಿ-9, 10 ಮತ್ತು 15 ರ ದಾಖಲೆಗಳನ್ನು ಪ್ರಕರಣಕ್ಕೆ ಉಪಯೋಗವಾಗುವಂತೆ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಪಿ-15 ರ ದಾಖಲೆಯ ವಿಚಾರ ಪ್ರತಿವಾದಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನಿಪಿ-15 ರಲ್ಲಿ ನಮ್ಮ ಕುಟುಂಬದ ಸದಸ್ಯರನ್ನು ಹೊರತುಪಡಿಸಿ ಬೇರೆ ಯಾರ ಸಹಿ ಇಲ್ಲ. ಪ್ರತಿವಾದಿಗಳು ಬೆಂಗಳೂರಿನಲ್ಲಿ ವಾಸ ಇರಲಿಲ್ಲ. ಸ.ನಂ.416 ರ ಪೋಡಿ ರದ್ದುಪಡಿಸಲು ಸಲ್ಲಿಸಿದ್ದ ಅರ್ಜಿ ದಿ.23.06.2023 ರಂದು ವಜಾ ಆಗಿದೆ ಎಂದರೆ ಸರಿಯಲ್ಲ. DDLR ರವರ ಬಳಿ ಸ.ನಂ.416/2 ರ ಜಮೀನನ್ನು ಸರ್ವೇ ಮಾಡಿಸಿಕೊಡುವಂತೆ ಕೋರಿಕೊಂಡಿದ್ದು, ಇಲ್ಲಿಯವರೆಗೂ ಸರ್ವೇ ಆಗಿಲ್ಲ. ದಾಖಲೆಗಳು ಸಿಗುತ್ತಿಲ್ಲದ ಕಾರಣ ಸರ್ವೇ ಆಗಿಲ್ಲ. ಅಕ್ಟೋಬರ್ ತಿಂಗಳಲ್ಲಿ ಕಾಫೀ ಕುಯ್ಯಲು ಇರುವುದಿಲ್ಲ ಎಂದರೆ ಸಾಕ್ಷಿಯು ಮಳೆ ಬಂದಾಗ ಕೆಲವೊಮ್ಮೆ ಇರುತ್ತದೆ ಎಂದು ನುಡಿಯುತ್ತಾರೆ. ದಾವಾ ಶೆಡ್ಯೂಲ್ ಕ್ರ.ಸಂ.6 ರ ಜಮೀನಿಗೆ ಪ್ರತಿವಾದಿ ತೊಂದರೆ ಕೊಟ್ಟಿದ್ದಾರೆ ಎಂದು ವಾದಪತ್ರದಲ್ಲಿ ಬರೆಸಿದ್ದೇನೆ.

ದಾವಾ ಶೆಡ್ಯೂಲ್ ಕ್ರ.ಸಂ.6 ರ ಜಮೀನಿನ ಪಶ್ಚಿಮ ದಿಕ್ಕಿಗೆ ಸ.ನಂ.78 ಇದೆ ಎಂದು ವಾದಪತ್ರದಲ್ಲಿ ತಿಳಿಸಲಾಗಿಲ್ಲ. ನವೆಂಬರ್ 2022 ರಲ್ಲಿ ಪ್ರತಿವಾದಿಗಳು ಎರಡು ಬಂದೂಕನ್ನು ಇಟ್ಟುಕೊಂಡು ನಮ್ಮ ಜಮೀನಿಗೆ ಬಂದಿದ್ದರು ಎಂದು ವಾದಪತ್ರದಲ್ಲಿ ಬರೆಸಲಾಗಿದೆ. ಆ ದಿನ ಪ್ರತಿವಾದಿಗಳು ದಾವಾ ಶೆಡ್ಯೂಲ್ ಕ್ರ.ಸಂ.6 ರ ಜಮೀನು ಮತ್ತು ಮಾಕೋನಹಳ್ಳಿ ಗ್ರಾಮದ ಸ.ನಂ.306 ರ ನಮ್ಮ ಜಮೀನಿಗೆ ಬಂದಿದ್ದರು. ಕೆಲ್ಲೂರಿನ ಜಮೀನಿನಿಂದ ಮಾಕೋನಹಳ್ಳಿ ಜಮೀನಿಗೆ ಸಮಾರು 1 ½ ಕಿ.ಮೀ.ಅಂತರವಿದೆ. ಪ್ರತಿವಾದಿಗಳು ಬಂದೂಕು ಇಟ್ಟುಕೊಂಡು ಬಂದಿದ್ದರು ಎಂದು ಹೇಳಿರುವ ವಿಚಾರವಾಗಿ ಪೋಲಿಸರು ದೂರು ಕೊಟ್ಟಿದ್ದು ಪೋಲಿಸರು ರಾಜೀ ಮಾಡಿಸಿದ್ದಾರೆ. ರಾಜೀ ಸಂದರ್ಭದಲ್ಲಿ ಪೋಲಿಸ್ ಠಾಣೆಗೆ ಪ್ರತಿವಾದಿಗಳು ಬಂದೂಕನ್ನು ತಂದಿರಲಿಲ್ಲ. ಬಂದೂಕನ್ನು ತರಿಸುವಂತೆ ನಾವು ಪೋಲಿಸರಿಗೆ ತಿಳಿಸಿದರೂ ಸಹಾ ಪೋಲಿಸರು ಪ್ರಕರಣವನ್ನು ಮುಕ್ತಾಯಗೊಳಿಸಿದರು.

ದಾವಾ ಶೆಡ್ಯೂಲ್ ಕ್ರ.ಸಂ.7 ರ 2 ಎಕರೆ 21 ಗುಂಟೆ ಜಮೀನಿನಲ್ಲಿ ಪ್ರತಿವಾದಿಗಳು ಸುಮಾರು 23 ಮರಗಳನ್ನು ಕಡಿದು ಹಾಕಿದ್ದಾರೆ. ಈ ವಿಚಾರವಾಗಿ ಅರಣ್ಯ ಇಲಾಖೆಗೆ ದೂರು ನೀಡಿಲ್ಲ. ಆ ಟಿಂಬರ್ ಗಳನ್ನು ಪೋಲಿಸರು ಅಮಾನತ್ತುಪಡಿಸಿಕೊಂಡಿಲ್ಲ. ಮರಗಳನ್ನು ಕಡಿದಿರುವ ವಿಚಾರವಾಗಿ ಭಾವಚಿತ್ರಗಳನ್ನು ತೆಗೆದಿದ್ದು ಅವುಗಳನ್ನು ಹಾಜರುಪಡಿಸಿಲ್ಲ. ರಾಜೀಯಲ್ಲಿ ನನ್ನ ತಂದೆಯೇ ಮರಗಳನ್ನು ಕಡಿಸಿರುವುದಾಗಿ ಹೇಳಿರುವ ಕಾರಣ ಭಾವಚಿತ್ರಗಳನ್ನು ಹಾಜರುಪಡಿಸಿಲ್ಲ. ಈ ವಿಚಾರವನ್ನು ವಾದಪತ್ರದಲ್ಲಿ ಹೇಳಿಲ್ಲ. ನಮ್ಮ ಕೂಲಿ ಕಾರ್ಮಿಕರ ಪರವಾಗಿ ರೈಟರ್ ರವರ ಮೂಲಕ ಪೋಲಿಸರಿಗೆ ದೂರು ಕೊಡಿಸಿದರೂ ಸಹಾ ಪೋಲಿಸರು ದೂರನ್ನು ಸ್ವೀಕರಿಸಲಿಲ್ಲ. ಪೋಲಿಸ್ ಠಾಣೆಯಲ್ಲಿ ರಾಜೀಯಾಗಿರುವ ಕಾರಣ ಆ ದಾಖಲೆಗಳನ್ನು ಹಾಜರುಪಡಿಸಿಲ್ಲ. ದಾವಾ ಶೆಡ್ಯೂಲ್ ಕ್ರ.ಸಂ.6 ರ ಜಮೀನು ಮತ್ತು ಮಾಕೋನಹಳ್ಳಿ ಗ್ರಾಮದ ಸ.ನಂ.306 ರ ಜಮೀನಿನಲ್ಲಿ ಕೂಲಿ ಕೆಲಸಗಾರರಿಗೆ ತೊಂದರೆ ಕೊಟ್ಟಿದ್ದಾರೆ.

**<u>ಮುಂದುವರೆದ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

Sd/-

ಸಾಕ್ಷಿ ಸಹಿಃ

ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಪ್ರದನ್ಯಾದಂ.,
ಮೂಡಿಗೆರೆ.